# ಕರ್ನಾಟಕ ವಿಧಾನ ಪರಿಷತ್ತು

(15)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1032
ಉತ್ತರಿಸಬೇಕಾದ ದಿನಾಂಕ : 25.07.2024
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ .ಕೆ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ರಾಜ್ಯದಲ್ಲಿ ಒಟ್ಟು ಎಷ್ಟು ಕ್ರೀಡಾ ಹಾಸ್ಟೆಲ್ ಗಳು ಕಾರ್ಯನಿರ್ವಹಿಸುತ್ತಿವೆ: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 34 ಕ್ರೀಡಾ ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| 2 | ಸದರಿ ಎಲ್ಲಾ ಕ್ರೀಡಾ ಹಾಸ್ಟೆಲ್ ಗಳು ಸ್ವಂತ ಕಟ್ಟಡ ಹೊಂದಿವೆಯೇ; ಹಾಗೂ ಅವುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ: | ಕ್ರೀಡಾ ವಸತಿ ನಿಲಯಗಳ ಕಟ್ಟಡ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. ರಾಜ್ಯದ ಎಲ್ಲಾ ಕ್ರೀಡಾ ವಸತಿ ಶಾಲೆ/ನಿಲಯಗಳಲ್ಲಿ ಕ್ರೀಡಾಪಟುಗಳ ವಾಸ್ತವ್ಯ ಹಾಗೂ ಕ್ರೀಡಾ ತರಬೇತಿಗೆ ಅಗತ್ಯವಾದ ಕನಿಷ್ಟ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸಿ, ಕ್ರೀಡಾ ವಸತಿ ನಿಲಯಗಳ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು ಹಂತ-ಹಂತವಾಗಿ ಕ್ರಮ ವಹಿಸಲಾಗುತ್ತಿದೆ. |
| 3 | ಸದರಿ ಕ್ರೀಡಾ ಹಾಸ್ಟೆಲ್ ಗಳಲ್ಲಿ ಪ್ರಸ್ತುತ ಇರುವ ದಾಖಲಾತಿ ಸಾಮರ್ಥ್ಯವೆಷ್ಟು; ಹಾಗೂ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು: (ಪ್ರತಿ ಹಾಸ್ಟೆಲ್ ನ ವಿವರ ಪ್ರತ್ಯೇಕವಾಗಿ ನೀಡುವುದು) | ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| 4 | ಸದರಿ ಕ್ರೀಡಾ ಹಾಸ್ಟೆಲ್ ಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಸೌಲಭ್ಯಗಳು ಯಾವುವು: | ಕ್ರೀಡಾ ಹಾಸ್ಟೆಲ್ ಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಊಟೋಪಹಾರ, ಕ್ರೀಡಾ ತರಬೇತಿ, ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ/ದಿನ ಭತ್ಯೆ, ಕ್ರೀಡಾ ಸಮವಸ್ತ್ರ, ಕ್ರೀಡಾ ಸಾಮಗ್ರಿಗಳು ಹಾಗೂ ಕ್ರೀಡಾ ಸಾಧಕರಿಗೆ ನಗದು ಪ್ರೋತ್ಸಾಹಧನ ನೀಡಲಾಗುತ್ತಿದೆ. |
| 5 | ಸದರಿ ವಿದ್ಯಾರ್ಥಿಗಳು ಕ್ರೀಡಾ ರಂಗದಲ್ಲಿ ಅದ್ವಿತೀಯ ಸಾಧನೆ ಮಾಡುವಂತೆ ಉತ್ತೇಜನ ಮತ್ತು ಪ್ರೇರೇಪಣೆ ನೀಡಲು ಸರ್ಕಾರ ರೂಪಿಸಿರುವ ಕಾರ್ಯಕ್ರಮ ಹಾಗೂ ಯೋಜನೆಗಳೇನು? | ವಿವರವನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ. |

ವೈಎಸ್‌ಡಿ-ಇಬಿಬಿ/74/2024

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

# ಅನುಬಂಧ-1

ರಾಜ್ಯದಲ್ಲಿರುವ ಕ್ರೀಡಾ ತರಬೇತಿ ವಸತಿ ಶಾಲೆ/ನಿಲಯಗಳ ವಿವರ:

| ಕ್ರ.ಸಂ | ಕ್ರೀಡಾ ಶಾಲೆ/ನಿಲಯಗಳ ಹೆಸರು | ದಾಖಲಾತಿ ಸಾಮರ್ಥ್ಯ | ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ | | ಒಟ್ಟು |
|---|---|---|---|---|---|
| | | | ಬಾಲಕ | ಬಾಲಕಿ | |
| 1 | ಬೆಂಗಳೂರು ನಗರ | 200 | 184 | - | 184 |
| 2 | ವಿದ್ಯಾನಗರ, ಬೆಂಗಳೂರು | 175 | 115 | 59 | 174 |
| 3 | ಮೈಸೂರು | 200 | 24 | 101 | 125 |
| 4 | ಕೂಡಿಗೆ, ಕೊಡಗು | 150 | 86 | 43 | 129 |
| 5 | ಬೆಳಗಾವಿ | 180 | 96 | 62 | 158 |
| 6 | ದಾವಣಗೆರೆ | 170 | 166 | - | 166 |
| 7 | ಚಿಕ್ಕಮಗಳೂರು | 100 | 34 | 17 | 51 |
| 8 | ಹಾವೇರಿ | 100 | 69 | 14 | 83 |
| 9 | ಮಡಿಕೇರಿ, ಕೊಡಗು | 60 | 26 | 21 | 47 |
| 10 | ಮಂಡ್ಯ | 75 | 23 | 44 | 67 |
| 11 | ಮಂಗಳೂರು(ದ.ಕ) | 50 | 28 | 18 | 46 |
| 12 | ರಾಮನಗರ | 50 | 27 | - | 27 |
| 13 | ಶಿವಮೊಗ್ಗ | 130 | 75 | 37 | 112 |
| 14 | ಚಿತ್ರದುರ್ಗ | 75 | 12 | 5 | 17 |
| 15 | ಉಡುಪಿ | 100 | 46 | 35 | 81 |
| 16 | ಧಾರವಾಡ | 100 | 58 | 40 | 98 |
| 17 | ಕಲಬುರ್ಗಿ | 50 | 30 | 4 | 34 |
| 18 | ಬಳ್ಳಾರಿ | 100 | 81 | - | 81 |
| 19 | ಕೊಪ್ಪಳ | 100 | 27 | 23 | 50 |
| 20 | ರಾಯಚೂರು | 50 | 30 | - | 30 |
| 21 | ಹಾಸನ | 80 | 23 | 46 | 69 |
| 22 | ಚಿಕ್ಕಬಳ್ಳಾಪುರ | 40 | 26 | - | 26 |
| 23 | ಬಾಗಲಕೋಟೆ | 110 | 84 | 23 | 107 |
| 24 | ಕಾರವಾರ | 50 | 23 | 13 | 36 |
| 25 | ಹಳಿಯಾಳ, ಉತ್ತರ ಕನ್ನಡ ಜಿಲ್ಲೆ | 80 | 39 | 39 | 78 |
| 26 | ಪೊನ್ನಂಪೇಟೆ, ಕೊಡಗು | 70 | 53 | 16 | 69 |
| 27 | ಚಾಮರಾಜನಗರ | 40 | 30 | - | 30 |
| 28 | ಸಂತೇಮಾರಹಳ್ಳಿ, ಚಾಮರಾಜನಗರ | 50 | 50 | - | 50 |
| 29 | ಕೋಲಾರ | 50 | 32 | 6 | 38 |
| 30 | ಬೀದರ್ | 60 | 25 | - | 25 |
| 31 | ತುಮಕೂರು | 100 | 58 | 32 | 90 |
| 32 | ಯಾದಗಿರಿ | 50 | 20 | 21 | 41 |
| 33 | ವಿಜಯಪುರ | 110 | 56 | 53 | 109 |
| 34 | ಗದಗ | 100 | 61 | 39 | 100 |
| | **ಒಟ್ಟು** | **3205** | **1817** | **811** | **2628** |

## ಅನುಬಂಧ-2

### ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕ್ರೀಡಾ ವಸತಿ ನಿಲಯ ಕಟ್ಟಡ ವಿವರ

| ಕ್ರಸ | ಕ್ರೀಡಾ ವಸತಿ ಶಾಲೆ/ನಿಲಯ | ಬಾಲಕರ ವಸತಿ ಕಟ್ಟಡ ಇದೆ/ಇಲ್ಲ | ಬಾಲಕಿಯರ ವಸತಿ ಕಟ್ಟಡ ಇದೆ/ಇಲ್ಲ |
|---|---|---|---|
| 1 | ಕೊಡಿಗೆ | ಇದೆ ಕಟ್ಟಡವು 30 ವರ್ಷಕ್ಕಿಂತ ಹಳೆಯದಾಗಿದ್ದು, ಶಿಥಿಲಗೊಂಡಿರುವುದರಿಂದ ದುರಸ್ಥಿ/ನವೀಕರಣ ಅವಶ್ಯಕತೆ ಇದೆ. | ಇದೆ ಕಟ್ಟಡವು 30 ವರ್ಷಕ್ಕಿಂತ ಹಳೆಯದಾಗಿದ್ದು, ಶಿಥಿಲಗೊಂಡಿರುವುದರಿಂದ ದುರಸ್ಥಿ/ನವೀಕರಣ ಅವಶ್ಯಕತೆ ಇದೆ. |
| 2 | ವಿದ್ಯಾನಗರ, ಬೆಂಗಳೂರು | ಇದೆ | ಇದೆ |
| 3 | ಉಡುಪಿ | ಇದೆ | ಇದೆ |
| 4 | ಬೆಳಗಾವಿ | ಇದೆ | ಇದೆ |
| 5 | ತುಮಕೂರು | ಇದೆ | ಇದೆ |
| 6 | ಹಳಿಯಾಳ | ಇದೆ | ಇದೆ |
| 7 | ವಿಜಯಪುರ | ಇದೆ ಕಟ್ಟಡವು 30 ವರ್ಷಕ್ಕಿಂತ ಹಳೆಯದಾಗಿದ್ದು, ಶಿಥಿಲಗೊಂಡಿರುವುದರಿಂದ ದುರಸ್ಥಿ ಅವಶ್ಯಕತೆ ಇದೆ. | ಇದೆ |
| 8 | ಹಾಸನ | ಇದೆ | ಇದೆ |
| 9 | ಚಿಕ್ಕಮಗಳೂರು | ಇದೆ | ಇದೆ |
| 10 | ಮಂಗಳೂರು(ದ.ಕ) | ಇದೆ | ಇದೆ ಬಾಲಕಿಯರ ವಸತಿ ನಿಲಯ ಕಟ್ಟಡದ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಪ್ರಸ್ತುತ ಬಾಲಕಿಯರಿಗೆ ಲಭ್ಯ ಇಲಾಖಾ ಕಟ್ಟಡದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. |
| 11 | ಮಂಡ್ಯ | ಇದೆ | ಇದೆ |
| 12 | ಹಾವೇರಿ | ಇದೆ | ಛಾವಣಿ ಮಟ್ಟದವರೆಗೂ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಮಹಿಳಾ ಕ್ರೀಡಾಪಟುಗಳಿಗೆ ತಾತ್ಕಾಲಿಕವಾಗಿ ಲಭ್ಯ ಕಟ್ಟಡದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. |
| 13 | ರಾಯಚೂರು | ಇದೆ | ಕಟ್ಟಡ ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಸದರಿ ಕಟ್ಟಡದಲ್ಲಿನ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯಗಳು ಬಾಕಿ ಇರುತ್ತವೆ. ಮಹಿಳಾ ಕ್ರೀಡಾಪಟುಗಳಿಗೆ ತಾತ್ಕಾಲಿಕವಾಗಿ ಲಭ್ಯ ಕಟ್ಟಡದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. |
| 14 | ಚಾಮರಾಜನಗರ | ಇದೆ | ಕಟ್ಟಡ ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಸದರಿ ಕಟ್ಟಡದಲ್ಲಿನ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯಗಳು ಬಾಕಿ ಇರುತ್ತವೆ. ಮಹಿಳಾ ಕ್ರೀಡಾಪಟುಗಳಿಗೆ ತಾತ್ಕಾಲಿಕವಾಗಿ ಲಭ್ಯ ಕಟ್ಟಡದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. |
| 15 | ಯಾದಗಿರಿ | ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರ ಕ್ರೀಡಾಪಟುಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು. ಕ್ರೀಡಾಪಟುಗಳಿಗೆ ತಾತ್ಕಾಲಿಕವಾಗಿ ಲಭ್ಯ ಕಟ್ಟಡದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. | |
| 16 | ಕೋಲಾರ | ಇದೆ | ಬಾಲಕಿಯರ ವಸತಿ ನಿಲಯ ಕಟ್ಟಡ ನಿರ್ಮಾಣವನ್ನು ಹೆಚ್.ಎ.ಎಲ್. ಸಂಸ್ಥೆಯ ಸಿ.ಎಸ್.ಆರ್. ಅನುದಾನದಿಂದ ಕೈಗೊಂಡಿದ್ದು, ಕಾಮಗಾರಿ ಅಂತಿಮ ಹಂತದಲ್ಲಿದೆ. ಮಹಿಳಾ ಕ್ರೀಡಾಪಟುಗಳಿಗೆ ತಾತ್ಕಾಲಿಕವಾಗಿ ಲಭ್ಯ ಕಟ್ಟಡದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದ್ದು, ಶೀಘ್ರದಲ್ಲಿ ಕ್ರೀಡಾಪಟುಗಳಿಗೆ ಹೊಸ ಕ್ರೀಡಾ ವಸತಿ ನಿಲಯದಲ್ಲಿ ವಾಸ್ತವ್ಯ ಒದಗಿಸಲಾಗುವುದು. |
| 17 | ಚಿಕ್ಕಬಳ್ಳಾಪುರ | ಬಾಲಕ:ಬಾಲಕಿಯರ ವಸತಿ ನಿಲಯ ಕಟ್ಟಡ ನಿರ್ಮಾಣವನ್ನು ಹೆಚ್.ಎ.ಎಲ್. ಸಂಸ್ಥೆಯ ಸಿ.ಎಸ್.ಆರ್. ಅನುದಾನದಿಂದ ಕೈಗೊಂಡಿದ್ದು, ಕಾಮಗಾರಿ ಅಂತಿಮ ಹಂತದಲ್ಲಿದೆ. ಪ್ರಸ್ತುತ ಕ್ರೀಡಾಪಟುಗಳಿಗೆ ತಾತ್ಕಾಲಿಕವಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದ್ದು, ಶೀಘ್ರದಲ್ಲಿ ಕ್ರೀಡಾಪಟುಗಳಿಗೆ ಹೊಸ ಕ್ರೀಡಾ ವಸತಿ ನಿಲಯದಲ್ಲಿ ವಾಸ್ತವ್ಯ ಒದಗಿಸಲಾಗುವುದು. | |

| | | | |
|---|---|---|---|
| 18 | ಪೊನ್ನಂಪೇಟೆ, ಕೊಡಗು | ಕೃಷಿ ಇಲಾಖೆಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಲಾಖೆಯ ಸ್ವಂತ ಕಟ್ಟಡ ಇರುವುದಿಲ್ಲ. **2024-25 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಪೊನ್ನಂಪೇಟೆ ಕ್ರೀಡಾ ವಸತಿ ನಿಲಯ ಕಟ್ಟಡಕ್ಕಾಗಿ ರೂ 5.00 ಕೋಟಿ ಒದಗಿಸಲಾಗುವುದೆಂದು ಘೋಷಿಸಿರುತ್ತಾರೆ.** ಪ್ರಸಕ್ತ ಸಾಲಿನಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು. | |
| 19 | ಚಿತ್ರದುರ್ಗ | ಲಭ್ಯವಿರುವ ಒಂದು ಕ್ರೀಡಾ ವಸತಿ ನಿಲಯ ಕಟ್ಟಡದಲ್ಲಿ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾದ ಆಗಮನ/ನಿರ್ಗಮನ ವ್ಯವಸ್ಥೆಯೊಂದಿಗೆ ಅಥವಾ ಲಭ್ಯವಿರುವ ಇಲಾಖಾ ಕಟ್ಟದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಬಾಲಕಿಯರಿಗೆ ಪ್ರತ್ಯೇಕವಾದ ವಸತಿ ನಿಲಯ ಕಟ್ಟಡ ನಿರ್ಮಿಸುವ ಅವಶ್ಯಕತೆ ಇರುತ್ತದೆ. **2024-25 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದ 14 ಸ್ಥಳಗಳಲ್ಲಿ ಮುಂದಿನ ಎರಡು ವರ್ಷದೊಳಗೆ ರೂ 35.00 ಕೋಟಿ ವೆಚ್ಚದಲ್ಲಿ ಮಹಿಳಾ ಕ್ರೀಡಾ ವಸತಿ ನಿಲಯಗಳನ್ನು ನಿರ್ಮಿಸಲಾಗುವುದೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುತ್ತಾರೆ.** ಈ ಬಗ್ಗೆ ಅನುದಾನ ಹಂಚಿಕೆಯಾಗಿದ್ದು, ಅನುಷ್ಠಾನಕ್ಕೆ ಕ್ರಮವಹಿಸಲಾಗುವುದು. | |
| 20 | ಶಿವಮೊಗ್ಗ | | |
| 21 | ದಾವಣಗೆರೆ | | |
| 22 | ರಾಮನಗರ | | |
| 23 | ಸಂತೇಮಾರಹಳ್ಳಿ, ಚಾಮರಾಜನಗರ | | |
| 24 | ಕಲಬುರ್ಗಿ | | |
| 25 | ಬಳ್ಳಾರಿ | | |
| 26 | ಧಾರವಾಡ | | |
| 27 | ಮಡಿಕೇರಿ, ಕೊಡಗು | | |
| 28 | ಗದಗ | | |
| 29 | ಬೀದರ್ | | |
| 30 | ಕೊಪ್ಪಳ | | |
| 31 | ಕಾರವಾರ | | |
| 32 | ಬಾಗಲಕೋಟೆ | | |
| 33 | ಮೈಸೂರು | ಬಾಲಕರಿಗೆ ತಾತ್ಕಾಲಿಕವಾಗಿ ಪ್ರತ್ಯೇಕವಾದ ಇಲಾಖಾ ಕಟ್ಟಡದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. | ಇದೆ |
| 34 | ಬೆಂಗಳೂರು | ಹಿರಿಯ ಬಾಲಕರ ಕ್ರೀಡಾ ವಸತಿ ನಿಲಯ ಕಟ್ಟಡವಿದೆ. | ಬಾಲಕಿಯರ ವಿಭಾಗ ಇರುವುದಿಲ್ಲ. |

# ಅನುಬಂಧ-03

## ಯುವ ಕ್ರೀಡಾಪಟುಗಳು ಕ್ರೀಡಾ ರಂಗದಲ್ಲಿ ಅದ್ವಿತೀಯ ಸಾಧನೆ ಮಾಡುವಂತೆ ಉತ್ತೇಜನ ಹಾಗೂ ಪ್ರೇರೆಪಣೆ ನೀಡಲು ಸರ್ಕಾರ ರೂಪಿಸಿರುವ ಕಾರ್ಯಕ್ರಮ ಹಾಗೂ ಯೋಜನೆಗಳ ವಿವರ ಕೆಳಕಂಡಂತಿದೆ.

- **ಕ್ರೀಡಾ ಮೂಲಸೌಕರ್ಯಗಳ ಸೃಜನೆ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿವೇಶನಗಳಲ್ಲಿ ಕ್ರೀಡಾ ಮೂಲಸೌಕರ್ಯಗಳನ್ನು ಸೃಜಿಸುವ ಮೂಲಕ ಕ್ರೀಡಾಪಟುಗಳ ಕ್ರೀಡಾ ತರಬೇತಿಗೆ ಉತ್ತೇಜನ ನೀಡಲಾಗುತ್ತಿದೆ. ಜಿಲ್ಲಾ ಹಾಗೂ ತಾಲ್ಲೂಕು ಕ್ರೀಡಾಂಗಣಗಳನ್ನು, ಈಜುಕೊಳ, ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊರತುಪಡಿಸಿ, 29 ಜಿಲ್ಲಾ ಕೇಂದ್ರಗಳು ಹಾಗೂ 125 ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ರಾಜ್ಯದ 33 ಸ್ಥಳಗಳಲ್ಲಿ ಈಜುಕೊಳಗಳು ಹಾಗೂ 60 ಸ್ಥಳಗಳಲ್ಲಿ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಅಲ್ಲದೇ, ರಾಜ್ಯದ 33 ಸ್ಥಳಗಳಲ್ಲಿ ಈಜುಕೊಳಗಳು ಹಾಗೂ 60 ಸ್ಥಳಗಳಲ್ಲಿ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಅಲ್ಲದೇ, ರಾಜ್ಯದ 19 ಸ್ಥಳಗಳಲ್ಲಿ ಆಧುನಿಕ ಸಿಂಥೆಟಿಕ್ ಅಥ್ಲೆಟಿಕ್ಸ್ ಟ್ರ್ಯಾಕ್‌ಗಳು ಹಾಗೂ 06 ಸ್ಥಳಗಳಲ್ಲಿ ಹಾಕಿ ಟರ್ಫ್‌ಗಳನ್ನು ಅಳವಡಿಸಲಾಗಿದೆ.
- **ಕ್ರೀಡಾ ವಸತಿ ನಿಲಯಗಳು**: ಇಲಾಖೆಯ ವತಿಯಿಂದ 34 ಕ್ರೀಡಾ ವಸತಿ ಶಾಲೆ/ನಿಲಯಗಳನ್ನು ಸ್ಥಾಪಿಸಲಾಗಿದ್ದು, ಪ್ರವೇಶ ಪಡೆದ ಕ್ರೀಡಾಪಟುಗಳಿಗೆ ಉಚಿತ ವಸತಿ, ಊಟೋಪಹಾರ, ಕ್ರೀಡಾ ತರಬೇತಿ, ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ/ದಿನ ಭತ್ಯೆ, ಕ್ರೀಡಾ ಸಮವಸ್ತ್ರ, ಕ್ರೀಡಾ ಸಾಮಗ್ರಿಗಳು ಹಾಗೂ ಕ್ರೀಡಾ ಸಾಧಕರಿಗೆ ನಗದು ಪ್ರೋತ್ಸಾಹಧನ ನೀಡಲಾಗುತ್ತಿದೆ.
- **ನಗದು ಪುರಸ್ಕಾರ** : ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ.

| ಕ್ರಸಂ | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಒಲಂಪಿಕ್ಸ್ ಗೇಮ್ಸ್ | 600.00 ಲಕ್ಷ | 400.00 ಲಕ್ಷ | 300.00 ಲಕ್ಷ |
| 2 | ಏಷಿಯನ್ ಗೇಮ್ಸ್ | 35.00 ಲಕ್ಷ | 25.00 ಲಕ್ಷ | 15.00 ಲಕ್ಷ |
| 3 | ಕಾಮನ್ ವೆಲ್ತ್ ಗೇಮ್ಸ್ | 35.00 ಲಕ್ಷ | 25.00 ಲಕ್ಷ | 15.00 ಲಕ್ಷ |
| 4 | ವರ್ಲ್ಡ್ ಕಪ್ /ಚಾಂಪಿಯನ್ ಷಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು) | 5.00 ಲಕ್ಷ | 3.00 ಲಕ್ಷ | 2.00 ಲಕ್ಷ |
| 5 | ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು) | 5.00 ಲಕ್ಷ | 3.00 ಲಕ್ಷ | 2.00 ಲಕ್ಷ |
| 6 | ನ್ಯಾಷನಲ್ ಚಾಂಪಿಯನ್ ಷಿಪ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 2.00 ಲಕ್ಷ | 1.00 ಲಕ್ಷ | 0.50 ಲಕ್ಷ |
| 7 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.50 ಲಕ್ಷ | 0.25 ಲಕ್ಷ | 0.15 ಲಕ್ಷ |
| 8 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.25 ಲಕ್ಷ | 0.15 ಲಕ್ಷ | 0.10 ಲಕ್ಷ |

- **ಕ್ರೀಡಾ ವಿದ್ಯಾರ್ಥಿ ವೇತನ**: ರಾಜ್ಯಮಟ್ಟದಲ್ಲಿ ಪದಕ ವಿಜೇತರಾಗಿ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ.10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

- **<u>ಶೈಕ್ಷಣಿಕ ಶುಲ್ಕ ಮರುಪಾವತಿ</u>:** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಗರಿಷ್ಟ ರೂ.50,000/- (Tuition Fees) ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.
- **<u>ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ವಿಶೇಷ ಉತ್ತೇಜನ</u>**: ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ ವಿತರಿಸಲಾಗುತ್ತಿದೆ. ಅಂತರ-ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ.5.00, 3.00 ಮತ್ತು 1.00 ಲಕ್ಷಗಳ ನಗದು ಪುರಸ್ಕಾರ ನೀಡಲಾಗುತ್ತಿದೆ.
- **<u>ಏಕಲವ್ಯ ಪ್ರಶಸ್ತಿ</u>:** ಏಕಲವ್ಯ ಪ್ರಶಸ್ತಿ ರಾಜ್ಯದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾಗಿದ್ದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು.
- **<u>ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ</u>:** ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು.
- **<u>ಆರೋಗ್ಯ ವಿಮೆ</u>:** ಕರ್ನಾಟಕದ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಸಮಯದಲ್ಲಿ ಗಾಯಗೊಂಡಲ್ಲಿ ಅವರ ಚಿಕಿತ್ಸೆಗೆ ನೆರವಾಗಲು ಆರೋಗ್ಯ ವಿಮೆ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ರೂ.100.00 ಲಕ್ಷಗಳನ್ನು ಒದಗಿಸಲಾಗಿದೆ.